## 35. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ.ನಾಲೂರು. ತೀರ್ಥಹಳ್ಳಿ ತಾಲ್ಲೂಕು

ಶಿಸ್ತಿಗೆ ಹೆಸರಾದ ಶಿವಪ್ಪನಾಯಕನ ನಾಡು ಶಿವಮೊಗ್ಗ ಜಿಲ್ಲೆಯ, ಹಸಿರು ತೋರಣದಿ ಸದಾ ನವವಧುವಿನಂತೆ ಕಂಗೊಳಿಸುತ್ತಾ ಹಿಂದೊಮ್ಮೆ ತೀರ್ಥರಾಜಪುರವೆಂದು ಹೆಸರಾಗಿ ಈಗ ತೀರ್ಥಹಳ್ಳಿ ಎಂದೇ ಜನಜನಿತವಾಗಿರುವ ತಾಲ್ಲೂಕಿನ, ಕಾಳಿಂಗ ನರ್ತನದ ಬೀಡು, ನಿತ್ಯಹರಿದ್ವರ್ಣದ ಕಾಡು, ಸೂರ್ಯಾಸ್ತದ ಸೊಬಗಿನ ನಾಡು ಆಗುಂಬೆ ಹೋಬಳಿಯಲ್ಲಿ ಹೆಬ್ಬಾವಿನಂತೆ ಅಂಕುಡೊಂಕಾದ ರಸ್ತೆಯಲ್ಲಿ ಸಾಗುವಾಗ ಹೆದ್ದಾರಿಯಲ್ಲಿ ಸಿಗುವ ಸುಂದರ ಮಲೆನಾಡಿನ ಹಳ್ಳಿಯೇ ನಾಲೂರು. ದಾರಿಯಲ್ಲಿ ಸಾಗುವ ದಾರಿಹೋಕರು ಹಾಗೂ ಶಿಕ್ಷಣಾಸಕ್ತರನ್ನು ಒಂದು ಕ್ಷಣ ಸೂಜಿಗಲ್ಲಿನಂತೆ ಆಕರ್ಷಿಸಿ ನಿಂತು ಒಳಬರುವಂತೆ ಮಾಡುವ ಮಾಂತ್ರಿಕ ತಾಣವೇ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಾಲೂರು.

1939ರಲ್ಲಿ ಪ್ರಾರಂಭವಾದ ಈ ಶಾಲೆಯು ಸರ್ಕಾರಿ ಶಾಲೆಗಳು ಪಾರಂಪರಿಕ ತಾಣಗಳಾಗಿ ಬದಲಾಗುತ್ತಿರುವ ಇಂತಹ ಸಂದರ್ಭದಲ್ಲಿಯೂ ಪ್ರತಿ ವರ್ಷ ವಿದ್ಯಾರ್ಥಿಗಳ ಸಂಖ್ಯೆಯನ್ನು ವೃದ್ಧಿಸಿಕೊಳ್ಳುತ್ತಾ ಸಾಗಿರುವುದು ಹೆಮ್ಮೆಯ ಗರಿಮೆಯೇ ಸರಿ. 2017-2018ನೇ ಶೈಕ್ಷಣಿಕ ವರ್ಷದಲ್ಲಿ 46 ವಿದ್ಯಾರ್ಥಿಗಳು ಅಭ್ಯಸಿಸುತ್ತಿದ್ದು 4 ಜನ ಉತ್ಸಾಹಿ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಹೆದ್ದಾರಿಯಿಂದ ಶಾಲೆ ಕಡೆ ನಡೆದಾಗ ಸುಂದರ ಶಾಲೆಯ ಮುಖಮಂಟಪವು ಸರ್ವರನ್ನು ಸ್ವಾಗತಿಸುತ್ತದೆ. ಇಲ್ಲಿರುವ ಕಾಂಪೌಂಡ್ ತೆರೆದು ಒಳನಡೆದಾಗ ಬಲಬದಿಯ ಕೊಳದ ಪೀಠದ ಮೇಲೆ ಆಸೀನಳಾಗಿರುವ ಶಾರದಾ ದೇವಿಯು ಸರ್ವರಿಗೂ ಆಶೀರ್ವದಿಸಿ ಕಳುಹಿಸಿದರೆ ಅದರ ಎಡಬದಿಯಲ್ಲಿರುವ ಅಕರ್ಷಕ ಧ್ವಜಸ್ಥಂಭವು ಎಂತವರಲ್ಲಿಯೂ ರಾಷ್ಟ್ರಭಕ್ತಿಯನ್ನು ಮೂಡಿಸುತ್ತದೆ. ಶಾಲೆಯ ಮುಂಭಾಗದಲ್ಲಿ ಹಲವು ರೀತಿಯ ಹಸಿರು ಸಸ್ಯಗಳಿಂದ ರೂಪಿತವಾಗಿರುವಂತಹ ಉದ್ಯಾನವನವು ಎಲ್ಲರ ಮನವನ್ನು ಮುದಗೊಳಿಸುವುದಲ್ಲದೇ ಉತ್ತಮ ಕಲಿಕಾ ವಾತಾವರಣವನ್ನು ಸೃಷ್ಟಿಸಿದೆ. ಹೊಂಡಗುಂಡಿಗಳಿಂದ ತುಂಬಿದ್ದ ತರಗತಿ ಕೋಣೆಗಳ ಮುಂಭಾಗವನ್ನು ಇಂಟರಲಾಕ್ ಹಾಕಿಸಿ ಸುಸಜ್ಜಿತಗೊಳಿಸಲಾಗಿದೆ.

### ಶಾಲೆಯ ಹಿನ್ನೆಲೆ :-

1939ರಲ್ಲಿ ಆರಂಭವಾದ ಈ ಶಾಲೆಯು ಈಗ್ಗೆ ನಾಲ್ಕು ವರ್ಷಗಳ ಹಿಂದೆ ಯಾವುದೇ ಭೌತಿಕ ಸೌಲಭ್ಯಗಳಿಲ್ಲದೆ ನರಳುತಿತ್ತು. ಶಾಲೆಯ ಆವರಣವು ಮಣ್ಣಿನ ಹೊಂಡಗುಂಡಿಗಳಿಂದ ತುಂಬಿ ಹಾವು ಹಲ್ಲಿಗಳ ಆಶ್ರಯ ತಾಣವಾಗಿತ್ತು. ಅಪ್ಪಟ ಮಲೆನಾಡಿನ ಹಳ್ಳಿಯಾಗಿದ್ದರೂ ಅಲಂಕಾರಿಕ ಗಿಡಗಳಿಲ್ಲದೆ ಬಣಗುಡುತಿತ್ತು. ಆದರೆ ಇಂದು ಈ ಶಾಲೆಯು ಇಲ್ಲಿನ ಎಸ್.ಡಿ.ಎಂ.ಸಿ ಹಾಗೂ ಶಿಕ್ಷಕರ ಪರಿಶ್ರಮದಿಂದಾಗಿ ಎಲ್ಲಾ ರೀತಿಯ ಭೌತಿಕ ಸೌಲಭ್ಯಗಳಿಂದ ಕೂಡಿದ ಮಾದರಿ ಶಾಲೆಯಾಗಿ ಬದಲಾಗಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

### ಕಲಿಕಾ ಪ್ರಕ್ರಿಯೆಗೆ ಪೂರಕವಾದ ಅಂಶಗಳು:-

- ನಲಿಕಲಿ ಕಲಿಕಾ ಕೊಠಡಿಯಲ್ಲಿ ಆಕರ್ಷಕ ತಟ್ಟೆಗಳಿಗನುಗುಣವಾದ ದುಂಡುಮೇಜು ಮತ್ತು ಕುರ್ಚಿಗಳ ವ್ಯವಸ್ಥೆ, ವಿಷಯವಾರು ಕಲಿಕಾ ಸಾಮಾಗ್ರಿ, ಕಲಿಕಾ ಚಪ್ಪರ, ಗೋಡೆಬರಹ ಹಾಗೂ ಸುಂದರವಾದ ವಾಲ್‌ಸ್ಲೇಟ್.
- ಸುಮಾರು ಒಂದು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಸ್ಮಾರ್ಟ್‌ಕ್ಲಾಸ್ ನಿರ್ಮಾಣ ಹಾಗೂ ತಂತ್ರಜ್ಞಾನಾಧಾರಿತ ತರಗತಿಗಳ ಬೋಧನೆ.
- ಓದು ಕರ್ನಾಟಕ,ಓದುವ ಮೂಲೆ. ಹತ್ತು ಅಂಶಗಳ ಕಾರ್ಯಕ್ರಮದ ಯಶಸ್ವಿ ಅನುಷ್ಠಾನ.
- ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳಂತಹ ಸಹಪಠ್ಯ ಚಟುವಟಿಕೆಗಳಿಗೆ ಪ್ರೋತ್ಸಾಹ. ಪ್ರತಿಭಾ ಕಾರಂಜಿ ಕಾರ್ಯಕ್ರಮದ ಹಲವು ಸ್ಪರ್ಧೆಗಳಲ್ಲಿ ಜಿಲ್ಲಾ ಹಂತದಲ್ಲಿಯೂ ಭಾಗವಹಿಸಿ ಪ್ರಶಸ್ತಿ ಗಳಿಕೆ.

- ಶೈಕ್ಷಣಿಕ ಪ್ರವಾಸ, ಕ್ಷೇತ್ರಭೇಟಿ ಹಾಗೂ ಪ್ರತಿಭಾ ಪುರಸ್ಕಾರದಂತಹ ಕಾರ್ಯಕ್ರಮಗಳ ಮೂಲಕ ವಿದ್ಯಾರ್ಥಿಗಳ ಪ್ರತಿಭಾ ಪ್ರದರ್ಶನಕ್ಕೆ ಅವಕಾಶ.
- ಇಲಾಖೆಯು ನೀಡುವ ಉಚಿತ ಪ್ರೋತ್ಸಾಹದಾಯಕ ಸೌಲಭ್ಯಗಳ ವಿತರಣೆಯ ಜೊತೆಗೆ ಉಚಿತ ನೋಟ್ ಪುಸ್ತಕ,ಬ್ಯಾಗ್ ಮತ್ತು ವಿವಿಧ ಕಲಿಕಾ ಸಾಮಾಗ್ರಿಗಳನ್ನು ದಾನಿಗಳಿಂದ ಸಂಗ್ರಹಿಸಿ ಪ್ರತಿವರ್ಷ ನೀಡಿಕೆ.
- ಕನ್ನಡ ಸಾಹಿತ್ಯ ಪರಿಷತ್ತು, ಲೇಖಕಿಯರ ಸಂಘ ಹಾಗೂ ವಿಶೇಷ ಸಾಧನೆ ಮಾಡಿರುವ ಸಾಧಕರನ್ನು ಶಾಲೆಗೆ ಆಹ್ವಾನಿಸಿ ವಿದ್ಯಾರ್ಥಿಗಳಿಂದ ಸ್ವರಚಿತ ಕವನ ರಚನೆ ಮತ್ತು ವಾಚನ, ವೈಯಕ್ತಿಕ ಸ್ವಚ್ಚತೆಯ ಬಗ್ಗೆ ಮಾಹಿತಿ, ಯಕ್ಷಗಾನ ಹಾಗೂ ಹಲವು ಜಾನಪದ ನೃತ್ಯ ರೂಪಕಗಳ ತರಬೇತಿ ನೀಡಿಸಿ ಅವುಗಳ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿದೆ.

**ಸಾಧನೆಗೆ ಸಂದ ಗರಿಮೆಗಳು:–**

- ಮುಖ್ಯಶಿಕ್ಷಕಿಯವರಿಗೆ'ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿ'ಯು ಸಂದಿದೆ.
- ನಮ್ಮ ಹೆಮ್ಮೆಯ ಶಾಲೆಗೆ 'ಕ್ಲಸ್ಟರ್ ಮಟ್ಟದ ಉತ್ತಮ ಶಾಲೆ ಪ್ರಶಸ್ತಿ'ಯು ದೊರೆತಿದೆ.
- 2017–18ರ ಸಿಎಸ್ಎಎಸ್ ಪರೀಕ್ಷೆಯಲ್ಲಿ ಸರಾಸರಿ 'ಎ' ಶ್ರೇಣಿ ಫಲಿತಾಂಶವು ಬಂದಿರುತ್ತದೆ.
- ಹಲವು ಸ್ಪರ್ಧೆಗಳಲ್ಲಿ'ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ'ಯಲ್ಲಿ ಪ್ರಶಸ್ತಿಗಳು ಸಂದಿರುತ್ತವೆ. ಹೀಗೆ ಹತ್ತು ಹಲವು ಪ್ರಶಸ್ತಿಗಳು ಈ ಶಾಲೆಗೆ ದೊರೆತಿದ್ದು ಒಂದು ಉತ್ತಮ ಎಸ್ ಡಿ ಎಂ ಸಿ ಹಾಗೂ ಉತ್ಸಾಹಿ ಮತ್ತು ಕರ್ತವ್ಯಬದ್ಧತೆಯ ಶಿಕ್ಷಕರಿದ್ದರೆ ಶಾಲೆಯನ್ನು ಹೇಗೆಲ್ಲಾ ಅಭಿವೃದ್ಧಿಪಡಿಸಬಹುದು ಎಂಬುದಕ್ಕೆ ಇದೊಂದು ಮಾದರಿ ಶಾಲೆಯಾಗಿದೆ.

**ಶಾಲೆಯಲ್ಲಿರುವ ಭೌತಿಕ ಸೌಲಭ್ಯಗಳು:–**

- ಸುಸಜ್ಜಿತವಾದ ಕಾಂಪೌಂಡ್ ಹಾಗೂ ಸುಂದರವಾದ ಮುಖಮಂಟಪ.
- ಆಕರ್ಷಕ ನೀರಿನ ಕೊಳದ ಜೊತೆಗೆ ಸರಸ್ವತಿಯ ಸುಂದರ ವಿಗ್ರಹ
- ಸುಮಾರು ಅರವತ್ತು ಸಾವಿರ ವೆಚ್ಚದ ರಾಷ್ಟ್ರಲಾಂಛನ ಹೊಂದಿರುವ ಸುಂದರವಾದ ಧ್ವಜಸ್ತಂಭ
- ಸಾಕಷ್ಟು ಪೀಠೋಪಕರಣ, ಗ್ರಂಥಾಲಯ, ಪ್ರಯೋಗೋಪಕರಣಗಳನ್ನು ಹೊಂದಿರುವ, ಸಾಕಷ್ಟು ಗಾಳಿ ಬೆಳಕು ಬರುವಂತೆ ಪೂರಕವಾಗಿರುವ ತರಗತಿ ಕೊಠಡಿಗಳು
- ಸದಾ ಸ್ವಚ್ಚತೆಯಿಂದ ನಳಿನಳಿಸುತ್ತಿರುವ ವಿಭಿನ್ನ ಸ್ವಾಧಿಷ್ಟ ತಿನಿಸುಗಳು ಹಾಗೂ ಕೈತೋಟದಿಂದ ಕೂಡಿರುವ ಅಡುಗೆ ಕೋಣೆ
- ಮೇಲ್ಛಾವಣಿ ಹೊಂದಿರುವ ಕೈ ತೊಳೆಯುವ ಆಕರ್ಷಕ ನೀರಿನ ತೊಟ್ಟಿ
- ಎಂದೆಂದೂ ಫಿನಾಯಿಲ್ ಪರಿಮಳ ಬೀರುತ್ತಾ ಸ್ವಚ್ಛವಾಗಿರುವ ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕವಾಗಿರುವ ಶೌಚಾಲಯಗಳು
- ಹಸಿಕಸ ಮತ್ತು ಒಣಕಸ ಸಂಗ್ರಹ ತೊಟ್ಟಿಗಳು ಹಾಗೂ ಮಳೆಕೊಯ್ಲು ಯೋಜನೆ
- ಅರಣ್ಯೀಕರಣದ ಭಾಗವಾಗಿ ತೆಂಗಿನ ಗಿಡ ಸೇರಿದಂತೆ ಕಾಡುಜಾತಿಯ ಸಸಿಗಳನ್ನು ನೆಟ್ಟು ಬೆಳೆಸಲಾಗುತ್ತಿದೆ.

**ಎಸ್.ಡಿ.ಎಂ.ಸಿ ಮತ್ತು ಸಮುದಾಯ ಹಾಗೂ ದಾನಿಗಳ ಪಾತ್ರ:–**

- ಶಾಲೆಯ ಮುಖಮಂಟಪವನ್ನು ದಾನಿಗಳು ನಿರ್ಮಿಸಿಕೊಟ್ಟಿದ್ದು ಇದನ್ನು ಅಕರ್ಷಕ ಬರಹ ಹಾಗೂ ಹಸೆ ಚಿತ್ತಾರದೊಂದಿಗೆ ಅಲಂಕರಿಸಲಾಗಿದೆ.
- ಕೊಕ್ಕರೆ ಹಾಗೂ ನೀರಿನ ಕೊಳದೊಳಗೆ ಕುಳಿತು ಸರ್ವರಿಗೂ ವಿದ್ಯಾಶೀರ್ವಾದವನ್ನು ಮಾಡುತ್ತಿರುವ ಶಾರದಾ ದೇವಿಯ ವಿಗ್ರಹವನ್ನು ದಾನಿಗಳ ನೆರವನ್ನು ಪಡೆದು ಪ್ರತಿಷ್ಠಾಪಿಸಲಾಗಿದೆ.
- ಸುಮಾರು ಅರವತ್ತು ಸಾವಿರ ರೂ.ಗಳನ್ನು ದಾನಿಗಳಿಂದ ದೇಣಿಗೆ ಪಡೆದು ಗ್ರಾನೈಟ್ ಶಿಲೆಗಳನ್ನು ಬಳಸಿ ರಾಷ್ಟ್ರಲಾಂಛನ ಹೊಂದಿರುವ ಸುಂದರವಾದ ಧ್ವಜಸ್ಥಂಭವನ್ನು ನಿರ್ಮಿಸಲಾಗಿದೆ.
- ಸ್ಥಳೀಯ ಸಂಸ್ಥೆ ಹಾಗೂ ದಾನಿಗಳ ನೆರವಿನಿಂದ ಸಂಗ್ರಹವಾದ ಮೊತ್ತದಿಂದ ಶಾಲಾ ಆವರಣದ ಮುಂಭಾಗದಲ್ಲಿ ಇಂಟರ್‌ಲಾಕ್,ಕೈ ತೊಳೆಯುವ ನೀರಿನ ತೊಟ್ಟಿ ಹಾಗೂ ಇದಕ್ಕೆ ಮೇಲ್ಚಾವಣಿ, 1000ಲೀಟರ್ ಸಂಗ್ರಹಣಾ ಸಾಮರ್ಥ್ಯದ ಸಿಂಟೆಕ್ಸ್ ತೊಟ್ಟಿ ಇವುಗಳನ್ನು ನಿರ್ಮಿಸಲಾಗಿದೆ.
- ಸುಮಾರು ಲಕ್ಷಕ್ಕಿಂತ ಹೆಚ್ಚು ಮೊತ್ತವನ್ನು ದಾನಿಗಳಿಂದ ಸಂಗ್ರಹಿಸಿ ಎರಡು ಸ್ಮಾರ್ಟ್‌ಕ್ಲಾಸ್ ಕೊಠಡಿಗಳನ್ನು ನಿರ್ಮಿಸಿದ್ದು ಕಲರ್ ಪ್ರಿಂಟರ್ ಮತ್ತು ಯುಪಿಎಸ್‌ಗಳ ವ್ಯವಸ್ಥೆಯನ್ನು ಮಾಡಲಾಗಿದೆ.
- ದಾನಿಗಳಿಂದ ಪ್ರತ್ಯೇಕ ಸಮವಸ್ತ್ರ,ನೋಟ್‌ಪುಸ್ತಕ ಮತ್ತು ಬ್ಯಾಗ್‌ಗಳನ್ನು ಪಡೆದು ವಿದ್ಯಾರ್ಥಿಗಳಿಗೆ ವಿತರಿಸುವ ಮೂಲಕ ಸಂಪೂರ್ಣ ಉಚಿತ ಶಿಕ್ಷಣ ನೀಡಲಾಗುತ್ತಿದೆ.
- ಕಾಂಪೌಂಡ್‌ಗೆ ಗೇಟ್ ಮತ್ತು ಅಕ್ಷರ ದಾಸೋಹ ಕಾರ್ಯಕ್ರಮದ ಯಶಸ್ವಿ ಅನುಷ್ಠಾನಕ್ಕಾಗಿ ಮಿಕ್ಸಿಯನ್ನು ದಾನಿಗಳಿಂದ ಪಡೆದು ಬಳಸಿಕೊಳ್ಳಲಾಗುತ್ತಿದೆ.
- ಜೀವ ವಿಮಾ ನಿಗಮದಿಂದ "ಜೀವ ಭೀಮಾ ಶಾಲೆ "ಎಂದು ನಾಮಾಂಕಿತವಾಗಿರುವುದಲ್ಲದೆ ಬಹುಮಾನ ಮೊತ್ತವನ್ನು ಪಡೆದು ಶುದ್ಧ ಕುಡಿಯುವ ನೀರಿನ ಘಟಕದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.


ಕೇವಲ ಭೌತಿಕ ಸೌಲಭ್ಯಗಳಿಗೆ ಒತ್ತು ನೀಡದೇ ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ವಿದ್ಯಾರ್ಥಿಗಳ ಸರ್ವಾಂಗೀಣ ಪ್ರಗತಿಗೆ ಇಲ್ಲಿನ ಶಿಕ್ಷಕರು ಎಸ್ ಡಿ ಎಂ ಸಿ ಹಾಗೂ ಸಮುದಾಯದವರ ನೆರವನ್ನು ಪಡೆದು ಸಾಧಿಸಿರುವುದಿಷ್ಟು,ಸಾಧಿಸಬೇಕಾಗಿರುವುದು ಬಹಳಷ್ಟಿದೆ.ನಿಮ್ಮೆಲ್ಲರ ಸಹಕಾರ ಮತ್ತು ಮಾರ್ಗದರ್ಶನದ ನಿರೀಕ್ಷೆಯಲ್ಲಿ...........










ಸರ್ಕಾರಿ ಹಿರಿಯ ಪ್ರಾಥಮಿಕಶಾಲೆ. ನಾಲೂರು



